# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ  E-mail : kannadapostnews@gmail.com  / ಕನ್ನಡ post  Price: ₹1

Vol.No.01 | Issue. 205 | Pages. 2 | Date: 24-06-2025, TUESDAY  RNI NO: KARKAN/2024/89601

ಸಂಪುಟ : 01 - ಸಂಚಿಕೆ : 205 - ಪುಟಗಳು : 2 - 24 ಜೂನ್ 2025 ಮಂಗಳವಾರ  Ph: 8762954248  ದರ : ₹1


## ಮಳೆಯಿಂದ ಹಾನಿಯಾಗದಂತೆ ಎಚ್ಚರ ವಹಿಸಿ

### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ನಿರ್ದೇಶನ | ಯಾವ ಸಮಸ್ಯೆಯಿದ್ದರೂ ಗಮನಕ್ಕೆ ತನ್ನಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜಿಲ್ಲೆಯ ವಿವಿಧೆಡೆ ಮಳೆ ಆರ್ಭಟ ಮುಂದುವರೆದಿದ್ದು ಅವಘಡ ಸಂಭವಿಸದಂತೆ ಎಚ್ಚರ ವಹಿಸಬೇಕು. ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ನಿಗಾ ಇರಲಿ ಎಂದು ಜಿಲ್ಲಾಧಿಕಾರಿ ಕೆ.ಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಳೆಯಿಂದ ಹಾನಿಯಾಗಿರುವ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ಮಳೆಯಿಂದ ಹುಲ್ಲಿನ ಬಣವೆ ನೆನೆಯುವುದರಿಂದ ಫಂಗಸ್ ತಗುಲುತ್ತದೆ. ಅದರಿಂದ ಜಾನುವಾರುಗಳಿಗೆ ತಿನ್ನಲು ಯೋಗ್ಯ ಮೇವು ಸಿಗುವುದಿಲ್ಲ. ಪಶು ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ದನಕರುಗಳ ಮೇವಿಗೆ ಅಭಾವ ಉಂಟಾಗದಂತೆ ಎಚ್ಚರ ವಹಿಸಬೇಕು ಎಂದು ನಿರ್ದೇಶನ ನೀಡಿದರು.

**ಸ್ವಚ್ಛತೆಗೆ ಆದ್ಯತೆ ನೀಡಿ:** ನಗರ ಪ್ರದೇಶಗಳಲ್ಲಿ ರಾಜಕಾಲುವೆ ಮತ್ತು ಚರಂಡಿಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮಳೆ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು. ಕೆರೆಕಟ್ಟೆ, ಗೋಕಟ್ಟೆ, ಬೃಹತ್ ನೀರಾವರಿಗಳ ಬಗ್ಗೆ ಪ್ರತ್ಯೇಕವಾಗಿ ಪಟ್ಟಿ ತಯಾರಿಸಿ ನೀಡಬೇಕು, ರಸ್ತೆಗಳಲ್ಲಿ ನೀರು ನಿಲ್ಲದಂತೆ ಗಮನ ಹರಿಸಬೇಕು. ಆದಷ್ಟು ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಬೇಕು. ಚರಂಡಿಗಳಲ್ಲಿ ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯ ಶೇಖರಣೆಯಾಗಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ ಎಂದರು.

ಮಳೆ ಹಾಗೂ ಗಾಳಿಗೆ ವಿದ್ಯುತ್ ಕಂಬ ಬೀಳುವ ತಂತಿ ನೇತಾಡುವ ಪ್ರಕರಣಗಳು ಹೆಚ್ಚಾಗಿ ಕೇಳಿಬರುತ್ತಿದೆ. ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದರೆ ಅಂತವರ ವಿರುದ್ಧ ಕ್ರಮ ಜರುಗಿಸಬೇಕು ಎಂದರು.

**ರೈತರ ಆತ್ಮಹತ್ಯೆ ತಡೆಯಿರಿ:** ಸಾಲಬಾಧೆ, ಬೆಳೆ ನಷ್ಟದಿಂದ ರೈತರು ಸಾಲ ತೀರಿಸಲು ಸಾಧ್ಯವಾಗದೆ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳುತ್ತಾರೆ. ಆತ್ಮಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಬೇಕು. ಈ ಬಗ್ಗೆ ತಿಳವಳಿಕೆ ಹಾಗೂ ಮನೋಸ್ಥೈರ್ಯ ತುಂಬುವ ಕೆಲಸ ಅಧಿಕಾರಿಗಳಿಂದ ಆಗಬೇಕು ಎಂದು ಹೇಳಿದರು.

ಹಾವು ಕಡಿತ ಮತ್ತು ಆಕಸ್ಮಿಕ ಸಾವು ಕುರಿತು ಪ್ರತ್ಯೇಕ ವರದಿ ನೀಡಿ ಪರಿಹಾರ ವಿತರಣೆಗೆ ಕ್ರಮ ವಹಿಸಬೇಕು. ಜಾನುವಾರುಗಳು ಆಕಸ್ಮಿಕವಾಗಿ ಮೃತಪಟ್ಟರೆ ವಿಳಂಬ ಮಾಡದೆ ಮಾಲೀಕರಿಗೆ ಪರಿಹಾರ ತಲುಪಿಸಬೇಕು. ಮಳೆಗಾಲದಲ್ಲಿ ಹರಡಬಹುದಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚು ಗಮನ ಹರಿಸಿ ಜನರಲ್ಲಿ ಜಾಗೃತಿ ಮೂಡಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಅವರಿಗೆ ಸೂಚಿಸಿದರು.

ಶಾಲೆ, ಆಸ್ಪತ್ರೆ ಆವರಣ ಹಾಗೂ ಮತ್ತಿತರ ಕಡೆಗಳಲ್ಲಿ ಮರದ ಕೊಂಬೆಗಳು ವಿದ್ಯುತ್ ತಂತಿಗೆ ತಾಗುವಂತಿದ್ದರೆ ಅವುಗಳನ್ನು ಕತ್ತರಿಸಲುಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು.

ಯಾವುದೇ ಸಮಸ್ಯೆ ಇದ್ದರೂ ತಕ್ಷಣ ನನ್ನ ಗಮನಕ್ಕೆ ತರಬೇಕು. ತುರ್ತು ಸಂದರ್ಭದಲ್ಲಿ ಅಗ್ನಿ ಶಾಮಕ ವಾಹನದ ಅವಶ್ಯಕತೆ ಹೆಚ್ಚಿರುತ್ತದೆ. ಅಗತ್ಯ ವಾಹನ ಖರೀದಿಗಾಗಿ ಸರ್ಕಾರಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಹೇಳಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್‌ಕುಮಾರ್, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ಹಾಗೂ ಇತರರಿದ್ದರು.

## ಚಿರತೆ ದಾಳಿಗೆ ಕುರಿಗಳು ಬಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಹೊಸಗದ್ದೆ ಗ್ರಾಮದಲ್ಲಿ ಚಿರತೆ ದಾಳಿ ನೆಡೆಸಿ ನಾಲ್ಕು ಕುರಿಗಳನ್ನು ಬಲಿ ಪಡೆದಿದೆ.

ಕುನಿಗನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಹೊಸಗದ್ದೆ ಗ್ರಾಮದ ಅರುಣ್ ಅವರಿಗೆ ಸೇರಿದ ನಾಲ್ಕು ಕುರಿಗಳನ್ನು ಮನೆಯಿಂದ ಅನತಿ ದೂರದಲ್ಲಿ ಮೇಯಲು ಕಟ್ಟಿ ಹಾಕಿರುವ ಸಂಧರ್ಭದಲ್ಲಿ ದಾಳಿ ಮಾಡಿರುವ ಚಿರತೆ ಒಂದು ಕುರಿಯನ್ನು ಸ್ಥಳದಲ್ಲಿ ಸಂಪೂರ್ಣವಾಗಿ ತಿಂದು ಇನ್ನು ಮೂರು ಕುರಿಗಳ ಕತ್ತು ಸೀಳಿ ಕೊಂದು ಹಾಕಿದೆ.

ವಿಷಯ ತಿಳಿಯುತ್ತಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನೆಡೆಸಿದ್ದಾರೆ. ಕುರಿಗಳ ಕತ್ತಿನ ಭಾಗಕ್ಕೆ ತಿಂದು ಹಾಕಿರುವುದರಿಂದ ಮೇಲ್ನೋಟಕ್ಕೆ ಚಿರತೆ ದಾಳಿ ಇರಬಹುದು ಎಂದು ಶಂಕಿಸಿದ್ದಾರೆ. ಮಂಗಳವಾರ ಮೃತ ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನಿಖರ ಕಾರಣ ತಿಳಿದು ಬರಲಿದೆ ಎಂದು ವಲಯ ಅರಣ್ಯ ಅಧಿಕಾರಿ ಹೇಮಂತ್ ತಿಳಿದಿದ್ದಾರೆ.

ಕೆಲ ತಿಂಗಳುಗಳಿಂದ ಈ ಭಾಗದಲ್ಲಿ ಚಿರತೆ ಚಲನವಲನ ಕಂಡು ಬಂದಿದ್ದು ಈ ಕುರಿತಂತೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದೆವು. ಆದರೆ ಇದುವರೆಗೂ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಭಾಗದ ಜನರು ದಿನ ನಿತ್ಯ ಭಯ ಭೀತಿಯಲ್ಲಿ ತಿರುಗಾಡುವ ಪರಿಸ್ಥಿತಿ ಎದುರಾಗಿದ್ದು ಹಂತಕ ಚಿರತೆಯನ್ನು ಕೂಡಲೇ ಸೆರೆ ಹಿಡಿಯಬೇಕು. ಚಿರತೆ ದಾಳಿಯಿಂದ ಮೃತ ಪಟ್ಟಿರುವ ಕುರಿಗಳ ಮಾಲೀಕರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಕುನಿಗನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಪ್ರಕಾಶ್ ಆಗ್ರಹಿಸಿದ್ದಾರೆ.

## ಎರಡು ದೇವಸ್ಥಾನಗಳಲ್ಲಿ ಹುಂಡಿ ಕಳವು

ಸಕಲೇಶಪುರ: ತಾಲ್ಲೂಕಿನ ಬೊಮ್ಮನಕೆರೆ ಹಾಗೂ ಕುಣಿಗಲ್ ಗ್ರಾಮದ ದೇವಸ್ಥಾನಗಳಲ್ಲಿ ಕಳ್ಳರು ಹುಂಡಿ ಒಡೆದು ಹಣ ದೋಚಿರುವ ಘಟನೆ ನಡೆದಿದೆ.

ಹೆತ್ತೂರು ಹೋಬಳಿ ಬೊಮ್ಮನಕೆರೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ಕಳ್ಳರು ದೇವಸ್ಥಾನದ ಬೀಗ ಮುರಿದು ದೇವಸ್ಥಾನದ ಹುಂಡಿ ಒಡೆದು ಹಣ ಕದ್ದಿದ್ದಾರೆ. ಪಕ್ಕದ ನಡನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಹುಂಡಿಯನ್ನು ಬಿಸಾಡಿರುವುದು ಪತ್ತೆಯಾಗಿದೆ. ಪಕ್ಕದ ಕುಣಿಗಲ್ ಗ್ರಾಮದ ಬಸವೇಶ್ವರ ಸ್ವಾಮಿಯ ದೇವಸ್ಥಾನದಲ್ಲೂ ಕಳ್ಳರು ಹುಂಡಿ ಒಡೆದು ಹಣವನ್ನು ದೋಚಿದ್ದಾರೆ. ಮಲೆನಾಡಿನ ಧಾರ್ಮಿಕ ಶ್ರದ್ಧಾ



ಕೇಂದ್ರಗಳನ್ನು ಗುರಿಯಾಗಿರಿಸಿ ಕಳ್ಳತನ ಮಾಡಿರುವುದು ಕಂಡುಬಂದಿದೆ. ಸಕಲೇಶಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಾಮ್ ಪ್ರಸಾದ್ ಮುಖರ್ಜಿ ಪುಣ್ಯ ತಿಥಿ

ಸಕಲೇಶಪುರ: ಜಗತ್ತಿನಲ್ಲಿ ಭಾರತವನ್ನು ಪ್ರಬಲ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿ ತಮ್ಮ ಬದುಕನ್ನೇ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ತ್ಯಾಗ ಮಾಡಿದ್ದಾರೆ ಎಂದು ತಾಲ್ಲೂಕು ಬಿಜೆಪಿ ಅಧ್ಯಕ್ಷ ವಳಲಹಳ್ಳಿ ಅಶ್ವಥ್ ಹೇಳಿದರು.

ಪಟ್ಟಣದ ಶಾಸಕರ ಗೃಹ ಕಚೇರಿಯಲ್ಲಿ ಸೋಮವಾರ ಬಿಜೆಪಿ ಮಂಡಲ ವತಿಯಿಂದ ಆಯೋಜಿಸಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಪುಣ್ಯ ತಿಥಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನೆಹರು ಸರ್ಕಾರದ ಪಾಕಿಸ್ತಾನ ಓಲೈಕೆ ಹಾಗೂ ಹಿಂದುಗಳ ಮೇಲಿನ ದೌರ್ಜನ್ಯ ಖಂಡಿಸಿ ಶ್ಯಾಮ್ ಪ್ರಸಾದ್ ಮುಖರ್ಜಿ



ಅವರು ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡಿದರು. ನೀತಿ, ತತ್ವದ ಆಧಾರದ ಮೇಲೆ ಮಂತ್ರಿ ಪದವಿ ತ್ಯಾಗ ಮಾಡಿದ ಸ್ವಾತಂತ್ರ್ಯ ಭಾರತದ ಪ್ರಪ್ರಥಮ ರಾಷ್ಟ್ರ ನಾಯಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರಾಗಿದ್ದಾರೆ. ದೇಶದ ಪರಿಸ್ಥಿತಿ ಅಧೋಗತಿಗೆ ಇಳಿದಾಗ, ರಾಜಕೀಯ ಅಸ್ಥಿರತೆ, ಆಡಳಿತ ದೋಷ ಕಂಡಾಗ ಅವಿರತ ದುಡಿದು ಭಾರತೀಯ ಜನಸಂಘ ಎಂಬ ಹೊಸ ಪಕ್ಷಕ್ಕೆ ನಾಂದಿ ಹಾಡಿದರು. ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಶ್ರೇಷ್ಠ ವಿದ್ವಾಂಸರು, ಶ್ರೇಷ್ಠ ರಾಜನೀತಿ ತಜ್ಞ, ಅಸಾಧಾರಣ ಸಂಸದೀಯ ಪಟು, ಭಾರತೀಯ ರಾಜಕೀಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಮುಖರ್ಜಿಯವರು ತಮ್ಮ ಬದುಕಿನುದ್ದಕ್ಕೂ ಪ್ರಖರ ರಾಷ್ಟ್ರೀಯತೆಯನ್ನೇ ಪ್ರತಿಪಾದಿಸಿದ್ದರು ಎಂದರು.

## ಶಾಸಕ ರಮೇಶ್ ಬಂಡಿಸಿದ್ದೇಗೌಡ ರಾಜೀನಾಮೆಗೆ ಒತ್ತಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಸ್ಲಿಂ ಸಮಾಜದ ಕುರಿತು ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವಹೇಳನಕಾರಿಯಾಗಿ ಮಾತನಾಡಿದ್ದು ಕೂಡಲೇ ತಮ್ಮ ಕ್ಷೇತ್ರಕ್ಕೆ ರಾಜೀನಾಮೆ ನೀಡಬೇಕೆಂದು ಜಿಲ್ಲಾ ಅಲ್ಪಸಂಖ್ಯಾತರ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

ವೀರಕನ್ನಡಿಗ ಟಿಪ್ಪು ಸೇನೆಯ ಅಕ್ಮಲ್ ಜಾವೇದ್ ಮಾತನಾಡಿ, ರಮೇಶ್ ಬಂಡಿಸಿದ್ದೇಗೌಡ ಅವರು ಸಾರ್ವಜನಿಕವಾಗಿ ಬಗರ್‌ಹುಕುಂ ಯೋಜನೆಯಡಿ ಅರ್ಜಿ ಸಲ್ಲಿಸಿದ್ದ ಕೆಲ ಮುಸ್ಲಿಂ ಸಮಾಜದವರು ಅರ್ಜಿ ಸಲ್ಲಿಸಿದ್ದರ ಬಗ್ಗೆ ಅಧಿಕಾರಿಗಳಿಗೆ ಪ್ರಶ್ನೆ ಮಾಡುತ್ತಿದ್ದಾರೆ. ಅಲ್ಲದೆ ಸಾಬರ್‌ಗೆ ಬಗರ್‌ಹುಕುಂ ಸರ್ಕಾರಿ ಜಮೀನಿಗೆ ಸಂಬಂಧಿಸಿ ಯಾರಾದರೂ ದಾಖಲೆ ಮಾಡಿಕೊಟ್ಟರೆ ಅಂಥವರನ್ನು ನೇಣಿಗೆ ಹಾಕುತ್ತೇನೆಂದು ಸಂವಿಧಾನ ವಿರೋಧಿ ಹಾಗೂ ಅಲ್ಪಸಂಖ್ಯಾತರ ವಿರೋಧಿ ಹೇಳಿಕೆ ನೀಡಿರುವುದನ್ನು ಖಂಡಿಸಿದರು.

ಇದು ಕೇವಲ ಹೇಳಿಕೆಯಲ್ಲಿ ಭಾರತದ ಸಂವಿಧಾನಾತ್ಮಕ ಮೌಲ್ಯಗಳ ಧರ್ಮ ನಿರಾಪೇಕ್ಷೆ ಧೋರಣೆ ವಿರುದ್ಧದ ನೇರ ದಾಳಿಯಾಗಿದೆ. ಇದನ್ನು ರಾಜ್ಯಾದ್ಯಂತ ಮುಸ್ಲಿಂ ಸಮುದಾಯ ತೀವ್ರವಾಗಿ ಖಂಡಿಸುತ್ತದೆ.

ಶಾಸಕಾಂಗದ ಪ್ರತಿನಿಧಿಯಾಗಿರುವ ಶಾಸಕರು, ಸಂವಿಧಾನದ ಅನುಚ್ಛೇಧ 51ಎ ಖಂಡಿಕೆ (ಈ) ಪ್ರಕಾರ, ದೇಶದ ಎಲ್ಲಾ ಧಾರ್ಮಿಕ ಭಾಷ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭೇದ ಭಾವದಿಂದ ಅತೀತವಾಗಿ ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯ ಮತ್ತು ಸಮಾನ ಭ್ರಾತೃತ್ವ ಬೆಳೆಸುವ ಬದಲು, ಸಾಮರಸ್ಯ ಹದಗೆಡಿಸುವ ಹಾಗೂ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಅವ್ಯಾಚ್ಯ ಪದ ಪದಪ್ರಯೋಗ ಮಾಡಿ ಅಧಿಕಾರಿ ವೃಂದದವರಲ್ಲಿ ಪ್ರಚೋದನೆ ಹುಟ್ಟು ಹಾಕುವುದರೊಂದಿಗೆ ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆ ತಂದಿದ್ದಾರೆ ಎಂದು ಕಿಡಿಕಾರಿದರು.

ದೇಶದ ಕಟ್ಟಕಡೆಯ ಪ್ರಜೆಯೂ ಈ ದೇಶದ ಆಸ್ತಿ ಎಂದು ಪರಿಗಣಿಸದಿರುವುದು ಖಂಡನೀಯ. ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷರು ರಮೇಶ್ ಬಂಡಿಸಿದ್ದೇಗೌಡ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕೆಂದು ಮನವಿ ಮಾಡಿದರು.

## ಕೆಂಬಾಳು ಪಿಡಿಓ ಲಂಚದಾಹಕ್ಕೆ ಬ್ರೇಕ್ ಹಾಕಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇ-ಸ್ವತ್ತು ಮಾಡಿಕೊಡಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲಂಚಕ್ಕೆ ಬೇಡಿಕೆಯಿಟ್ಟಿದ್ದು ಲಂಚವಿಲ್ಲದೆ ಯಾವ ಕೆಲಸಗಳು ಆಗುತ್ತಿಲ್ಲ ಎಂದು ಚನ್ನರಾಯಪಟ್ಟಣ ತಾಲ್ಲೂಕು ಕೆಂಬಾಳು ಗ್ರಾಮದ ಚಂದ್ರೇಗೌಡ ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, ಎಲ್ಲಾ ದಾಖಲಾತಿ ಇದ್ದರೂ ಇ-ಸ್ವತ್ತು ಮಾಡಿಕೊಡಲು ಲಂಚ ಕೊಡದ ಹಿನ್ನೆಲೆಯಲ್ಲಿ ಸತಾಯಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಮೇಲಧಿಕಾರಿಗಳು ತನಿಖೆ ನಡೆಸಿ

ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಅವರಿಗೆ ದೂರು ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದರು.

ವಸತಿ ಯೋಜನೆಯಡಿ ಮಂಜೂರಾದ ಮನೆಗಳನ್ನು ಲಂಚ ಕೊಟ್ಟವರಿಗೆ ಮಂಜೂರು ಮಾಡಿದ್ದಾರೆ. ನರೇಗಾ ಯೋಜನೆಯಡಿ ಕೆರೆಗಳ ಹೂಳೆತ್ತಿಸಬೇಕಿದ್ದರೂ ಜೆಸಿಬಿ ಬಳಸಿದ್ದಾರೆ. ಪಿಡಿಓ ದೇವರಾಜೇಗೌಡ ಮಾಡಿರುವ ಎಲ್ಲಾ ಅಕ್ರಮಗಳ ಕುರಿತು ದಾಖಲಾತಿಗಳು ನಮ್ಮ ಬಳಿ ಇವೆ. ಸಾಕ್ಷಿ ಸಮೇತ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡರಿಗೆ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಅಧಿಕಾರಿಯನ್ನು ಕೂಡಲೇ ವರ್ಗಾಯಿಸಬೇಕು. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಗ್ರಾಮದ ಬಸವೇಗೌಡ, ಗೋವಿಂದೇಗೌಡ, ರಾಮೇಗೌಡ, ಸ್ವಾಮಿ, ಗಣೇಶ್ ಇದ್ದರು.

## ಜಿಲ್ಲೆಯಲ್ಲಿ ಭೀತಿ ಹುಟ್ಟಿಸಿದ ಹೃದಯಾಘಾತ ಪ್ರಕರಣ

### ಹಿಮ್ಸ್‌ನಲ್ಲಿ ಇಲ್ಲ ಕ್ಯಾಥ್ ಲ್ಯಾಬ್ | ಒಬ್ಬರೇ ಹೃದಯ ತಜ್ಞ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣಗಳು ದಿನದಿಂದ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು ಆಸ್ಪತ್ರೆಗಳಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬಂದಿದೆ.

ಹೃದಯಾಘಾತ ಅಥವಾ ಹೃದಯ ಸಂಬಂಧಿತ ಕಾಯಿಲೆ ಪರಿಹಾರಕ್ಕೆ ಅತ್ಯವಶ್ಯಕವಾಗಿ ಬೇಕಿರುವ **CAPS Lab** ಕಲ್ಪಿಸುವಂತೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಎರಡು ವರ್ಷಗಳ ಹಿಂದೆಯೇ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯಾದರೂ ಇಲ್ಲಿವರೆಗೆ ಅನುಮೋದನೆ ಸಿಕ್ಕಿಲ್ಲ. **CAPS: Cardiac and Pulmonary Simulation Lab** ವೈದ್ಯಕೀಯ ಶಿಕ್ಷಣ ಹಾಗೂ ಸಂಶೋಧನೆಗೆ ಬಳಸಲಾಗುವ ನವೀನ ಪ್ರಯೋಗಾಲಯವಾಗಿದೆ. ಇದು ಹೃದಯ ಮತ್ತು ಶ್ವಾಸಕೋಶ ಸಂಬಂಧಿತ ತುರ್ತು ಪರಿಸ್ಥಿತಿಗಳನ್ನು ಗುರುತಿಸಿ ಚಿಕಿತ್ಸೆ ನೀಡಲು ವೈದ್ಯರಿಗೆ ನೆರವಾಗುತ್ತದೆ. ರೋಗಿಯ ಹೃದಯ ಗತಿಯ ವಸ್ತುಸ್ಥಿತಿ ಅಧ್ಯಯನ ಇದರಿಂದ ಆಗುತ್ತದೆ. ಹೃದಯಾಘಾತ, ಎಲೆಕ್ಟ್ರಿಕಲ್ ಶಾಕ್, ರಕ್ತದೊತ್ತಡ ಕುಸಿತ ಮುಂತಾದ ಪರಿಸ್ಥಿತಿಗಳನ್ನು ಅವಲೋಕಿಸಬಹುದು. ಕ್ಯಾಪ್ಸ್ ಪ್ರಯೋಗಾಲಯ ಇದ್ದರೆ ವೈದ್ಯರು ಚಿಕಿತ್ಸೆಗೆ ತ್ವರಿತಗತಿಯಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ಹೃದಯಾಘಾತದ ಸಂದರ್ಭದಲ್ಲಿ ಜೀವ ಉಳಿಸುವ ಪ್ರಮುಖ ಸಾಧನ ಇದಾಗಿದೆ. ಬೆಂಗಳೂರು, ಮೈಸೂರು ಹಾಗೂ ಮಂಗಳೂರಿನಂತಹ ದೊಡ್ಡ ನಗರಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾಪ್ಸ್ ವ್ಯವಸ್ಥೆ ಇದೆ. ಹಾಸನಕ್ಕೂ ಈ ಪ್ರಯೋಗಾಲಯದ ಅನಿವಾರ್ಯತೆ ಹೆಚ್ಚಿದೆ ಎಂದು ಹಿಮ್ಸ್ ಅನೇಕ ಬಾರಿ ಸರ್ಕಾರದ ಗಮನಕ್ಕೆ ತಂದರೂ ಯಾರೂ ಕಿವಿಗೊಡುತ್ತಿಲ್ಲ.

ಸದ್ಯ ಹಿಮ್ಸ್‌ನಲ್ಲಿ ಇಕೋ, ಇಸಿಜಿ, ರಕ್ತ ಪರೀಕ್ಷೆ ವ್ಯವಸ್ಥೆ ಇದೆ. ಆದರೆ ರೋಗಿಗಳಿಗೆ ಸ್ಟಂಟ್ ಹಾಕಲು ಕ್ಯಾಥ್ ಪ್ರಯೋಗಾಲಯ ಅವಶ್ಯಕತೆಯಿರುವುದರಿಂದ ಗಂಭೀರ ಸಮಸ್ಯೆಯಿರುವ ರೋಗಿಗಳನ್ನು ಮೈಸೂರಿನ ಜಯದೇವ ಆಸ್ಪತ್ರೆಗೆ ಕಳುಹಿಸಿಕೊಡಲಾಗುತ್ತಿದೆ.



#### ಜಿಲ್ಲೆಗೆ ಏಕೈಕ ಹೃದಯ ತಜ್ಞ

ಹೃದಯಾಘಾತದಿಂದಲೇ ಐದು ವರ್ಷದಲ್ಲಿ ಜಿಲ್ಲೆಯಲ್ಲಿ 190 ಜನರು ಮೃತಪಟ್ಟಿದ್ದಾರೆ. ಕಳೆದ ಒಂದು ತಿಂಗಳಲ್ಲಿ 11 ಜನರು ಅಸುನೀಗಿದ್ದಾರೆ. ಸುಸಜ್ಜಿತ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಿದೆಯಾದರೂ ಹೆಚ್ಚುವರಿ ಅನುದಾನ ಬಿಡುಗಡೆ ಆಗದಿರುವುದರಿಂದ ಜಿಲ್ಲೆಯ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಹಾಸನದಲ್ಲಿ ಮೆಡಿಕಲ್ ಕಾಲೇಜು, ಜಿಲ್ಲಾಸ್ಪತ್ರೆ, 15 ಸಮುದಾಯ ಆಸ್ಪತ್ರೆ, 7 ಸಾರ್ವಜನಿಕ ಆಸ್ಪತ್ರೆಗಳಿದ್ದರೂ ಕೇವಲ ಒಬ್ಬ ಹೃದಯ ತಜ್ಞರಿದ್ದಾರೆ. ಹಿಮ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅವರೊಬ್ಬರಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸುಲಭದ ಕೆಲಸವಲ್ಲ. ಹೆಚ್ಚುವರಿ ಹೃದಯ ತಜ್ಞರ ನೇಮಕ ಮಾಡಬೇಕೆಂಬ ಮನವಿಗೆ ಸರ್ಕಾರ ಸ್ಪಂದಿಸುತ್ತಿಲ್ಲ.

ಜಿಲ್ಲೆಯ ಎಲ್ಲಾ ಸಮುದಾಯ, ಸಾರ್ವಜನಿಕ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಸಿಜಿ ಇದೆಯಾದರೂ ರೋಗಿಗಳ ಪರೀಕ್ಷೆ ಮಾಡಲು ತಜ್ಞ ವೈದ್ಯರಿಲ್ಲ. ಸ್ಟಾಫ್ ನರ್ಸ್‌ಗಳೇ ಇಸಿಜಿ ಮಾಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸೂಚನೆ ನೀಡಿದ್ದಾರೆಯಾದರೂ ಗ್ರಾಮೀಣ ಭಾಗಗಳಲ್ಲಿ

> ಹಿಮ್ಸ್‌ನಲ್ಲಿ ಒಬ್ಬ ಹೃದಯ ತಜ್ಞರಿದ್ದಾರೆ. ಇಸಿಜಿ, ಇಕೋ, ರಕ್ತ ಪರೀಕ್ಷೆ ಮಾಡಲಾಗುತ್ತಿದೆ. ಕ್ಯಾಥ್ ಪ್ರಯೋಗಾಲಯ ಬಂದರೆ ಸ್ಟಂಟ್ ಅಳವಡಿಸಲು ಅನುಕೂಲವಾಗುತ್ತದೆ. ಎರಡು ವರ್ಷಗಳಿಂದ ಪ್ರಸ್ತಾವನೆ ಸಲ್ಲಿಸುತ್ತಲೇ ಇದ್ದು ಯಾವ ಪ್ರತಿಕ್ರಿಯೆ ಬಂದಿಲ್ಲ.
>
> **- ಡಾ. ಬಿ. ರಾಜಣ್ಣ, ಹಿಮ್ಸ್ ನಿರ್ದೇಶಕ**

ಬಹುತೇಕ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳನ್ನು ನೇರವಾಗಿ ಹಿಮ್ಸ್‌ಗೆ ರವಾನಿಸುವ ಪರಿಪಾಠ ಮುಂದುವರೆದಿದೆ. ಹೀಗಾಗಿ ಮಾರ್ಗಮಧ್ಯದಲ್ಲೇ ರೋಗಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

#### ಕಾರ್ಯಕರ್ತರಿಗೆ ತರಬೇತಿ

ಆಶಾ, ಅಂಗನವಾಡಿ ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್, ಡೆಂಗ್ಯೂ ಹಾಗೂ ಮಲೇರಿಯಾ ಕಾಯಿಲೆ ಕುರಿತು ತರಬೇತಿ ನೀಡಿ ಮನೆ ಮನೆಗೆ ತೆರಳಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಚಿಸಲಾಗುತ್ತಿತ್ತು. ಈ ವರ್ಷ ಹೆಚ್ಚುವರಿಯಾಗಿ ಹೃದಯಾಘಾತ ಕಾಯಿಲೆಯನ್ನು ಜಾಗೃತಿ ಕಾರ್ಯಕ್ರಮಕ್ಕೆ ಸೇರ್ಪಡೆ ಮಾಡಿದ್ದು ಆ ಬಗ್ಗೆಯೂ ಅರಿವು ಮೂಡಿಸುವಂತೆ ಸೂಚನೆ ನೀಡಲಾಗಿದೆ. ಈ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಅವರು ಕಳೆದ 15 ದಿನಗಳಿಂದ ತರಬೇತಿ, ಕಾರ್ಯಾಗಾರ ನಡೆಸುತ್ತಿದ್ದಾರೆ.

#### ಆರೋಗ್ಯ ನಿರ್ಲಕ್ಷ್ಯ ಬೇಡ

ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುವುದು ಬೇಡ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ. ನಿಯಮಿತ ವ್ಯಾಯಾಮ, ಪೌಷ್ಟಿಕ ಆಹಾರ ಸೇವನೆ, ಜಂಕ್‌ಫುಡ್‌ಗಳಿಂದ ದೂರ ಇರಬೇಕು. ಒತ್ತಡ ರಹಿತ ಜೀವನ ಶೈಲಿ ರೂಢಿಸಿಕೊಳ್ಳಬೇಕು. ಮದ್ಯಪಾನ ಹಾಗೂ ಅತಿಯಾದ ಮಾಂಸಾಹಾರ ಸೇವನೆಯೂ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರುತ್ತದೆ. ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

## ಡ್ರಗ್ಸ್ ದಂಧೆಯಲ್ಲಿ ಸಿಲುಕಿಸುವ ಯತ್ನ: 1.49 ಲಕ್ಷ ರೂ. ಸುಲಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪೊಲೀಸರ ಸೋಗಿನಲ್ಲಿ ಬಂದ ಮೂವರು ಅಪರಿಚಿತರು ಡ್ರಗ್ಸ್ ದಂಧೆಯಲ್ಲಿ ಸಿಲುಕಿಸುವುದಾಗಿ ಕೊಡಗು ಜಿಲ್ಲೆಯ ಇಬ್ಬರಿಂದ 1.49 ಲಕ್ಷ ರೂ. ಸುಲಿಗೆ ಮಾಡಿದ್ದಾರೆ.

ಕೊಡಗು ಜಿಲ್ಲೆ ಕುಶಾಲನಗರ ಹೋಬಳಿ ಚಿಕ್ಕಾಲುವಾರ ಗ್ರಾಮದ ಸುನಿಲ್, ಕೃತ್ವಿಕ್ ಪಂಗನಾಮ ಹಾಕಿಸಿಕೊಂಡವರು.

ಸುನಿಲ್ ಹಾಗೂ ಕೃತ್ವಿಕ್ ತರಕಾರಿ ವ್ಯಾಪಾರಿಗಳು. ಜೂ. 21 ರಂದು ಕರೆ ಮಾಡಿದ ಅಪರಿಚಿತ ಮಾರಾಟಕ್ಕಾಗಿ ಸುವರ್ಣಗೆಡ್ಡೆ ಇದೆ. ಹೊಳೇನರಸೀಪುರಕ್ಕೆ ಬಂದು ವ್ಯಾಪಾರ ಮಾಡಿ ಎಂದು ಹೇಳಿದ್ದ. ಆತನ ಮಾತು ನಂಬಿ ಮಾರನೇ ದಿನ ಹೊಳೆನರಸೀಪುರಕ್ಕೆ ಬಂದ ಇಬ್ಬರೂ ಕರೆ ಮಾಡಿದಾಗ ನಾನು ಬರಲು ತಡವಾಗುತ್ತದೆ ನಮ್ಮ ಕೆಲಸದ ನಾಗ ಎಂಬಾತ ಬರುತ್ತಾನೆ ಆತನೇ ನಿಮ್ಮನ್ನು ಜಮೀನು ಬಳಿ ಕರೆದುಕೊಂಡು ಹೋಗುತ್ತಾನೆ ಎಂದಿದ್ದ.

ಅಪರಿಚಿತನ ಮಾತು ನಂಬಿದ ಇಬ್ಬರು ನಾಗ ಎಂಬಾತನಿಗೆ ಕರೆ ಮಾಡಿ ಕರೆಸಿಕೊಂಡಿದ್ದು ಆತನನ್ನು ಕಾರಿನಲ್ಲಿ ಕೂರಿಸಿಕೊಂಡಿದ್ದಾರೆ. ಚನ್ನರಾಯಪಟ್ಟಣ ರಸ್ತೆಯಲ್ಲಿ ಸುಮಾರು 1 ಕಿ.ಮೀ. ಕರೆದುಕೊಂಡು ಹೋದ ನಾಗ ಖಾಲಿ ಜಮೀನಿನ ಬಳಿ ಕಾರು ನಿಲ್ಲಿಸಲು ತಿಳಿಸಿದ್ದಾನೆ. ಅಷ್ಟರಲ್ಲಿ ಕಾರಿನ ಹಿಂದೆಯೇ ಮತ್ತೊಂದು ಕಾರು ಬಂದಿದ್ದು ಅದರಲ್ಲಿದ್ದ ಒಬ್ಬ ಕುಡಿಯಲು ನೀರು ಇದೆಯಾ ಎಂದು ಕೇಳಿದ್ದಾನೆ. ನೀರು ಇಲ್ಲ ಸುನಿಲ್ ಎಂದು ಸುನಿಲ್ ಹೇಳುತ್ತಿದ್ದಂತೆ ಮೊಬೈಲ್ ಮತ್ತು ಕಾರಿನ ಕೀ ಕಿತ್ತುಕೊಂಡು ನಾವು ಪೊಲೀಸರು ಎಂದು ಸುಳ್ಳು ಹೇಳಿ ತಮ್ಮ ಕಾರಿನಲ್ಲಿ ಕೂರಿಸಿಕೊಂಡಿದ್ದಾರೆ.

ಪೊಲೀಸ್ ಎಂದಾಕ್ಷಣ ಸುನಿಲ್ ಹಾಗೂ ಹೃತ್ವಿಕ್ ಹೆದರಿದ್ದಾರೆ. ಬೆಂಗಳೂರು ಮಾರ್ಗವಾಗಿ ಚಲಿಸುತ್ತಿದ್ದಾಗ ನಾಗನ ಬಳಿಯಿದ್ದ ಬ್ಯಾಗ್‌ನಿಂದ ಬಿಳಿ ಬಣ್ಣದ ಪೌಡರ್ ತೋರಿಸಿ ನೀವು ಡ್ರಗ್ಸ್ ಮಾರಾಟಕ್ಕೆ ಬಂದಿದ್ದೀರಿ ಎಂದು ಕೇಸು ದಾಖಲಿಸಿ ಜೈಲಿಗೆ ಹಾಕುತ್ತೇವೆ, ಈ ಅಪಾಯದಿಂದ ಪಾರಾಗಬೇಕೆಂದರೆ 4 ಲಕ್ಷ ರೂ. ಕೊಡಬೇಕೆಂದು ಬೆದರಿಕೆ ಹಾಕಿದ್ದಾರೆ. ಹಿರೀಸಾವೆಯಲ್ಲಿ ಕಾರು ನಿಲ್ಲಿಸಿ ಕೃತ್ವಿಕ್‌ನನ್ನು ಚಿಲ್ಲರೆ ಅಂಗಡಿಗೆ ಕರೆದೊಯ್ದು ಅಲ್ಲಿನ ಕ್ಯೂಆರ್ ಕೋಡ್‌ಗೆ 50 ಸಾವಿರ ರೂ. ಹಣ ಹಾಕಿಸಿಕೊಂಡಿದ್ದಾರೆ. ನಂತರ ಸ್ನೇಹಿತರಿಗೆ ಕರೆ ಮಾಡಿಸಿ 99 ಸಾವಿರ ರೂ. ಹಾಕಿಸಿಕೊಂಡು ಅದನ್ನೂ ತಮಗೆ ವರ್ಗಾಯಿಸಿಕೊಂಡಿದ್ದಾರೆ. ಬಳಿಕ ಇಬ್ಬರನ್ನೂ ಹತ್ತಿಸಿಕೊಂಡ ಜಾಗಕ್ಕೆ ಬಿಟ್ಟು ಈ ವಿಚಾರವನ್ನು ಯಾರಿಗೂ ಹೇಳಬಾರದೆಂದು ಎಚ್ಚರಿಕೆ ನೀಡಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯಾಳನಹಳ್ಳಿ ಗ್ರಾಮಕ್ಕೆ ಮೂಲಸೌಕರ್ಯ ಮರೀಚಿಕೆ

## ಸಾರಿಗೆ ಬಸ್ ಕಾಣದ ಗ್ರಾಮ । ಅನೈರ್ಮಲ್ಯ ತಾಂಡವ । ಸ್ಥಳೀಯರ ಆಕ್ರೋಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಕಾಂಕ್ರಿಟ್ ಇಲ್ಲದ ಬೀದಿ ರಸ್ತೆ, ಅಸಮರ್ಪಕ ಚರಂಡಿ ವ್ಯವಸ್ಥೆ, ಕಾಣದ ಬೀದಿ ದೀಪ, ಬೀದಿ ಬದಿಯುದ್ದಕ್ಕೂ ಬೆಳೆದಿರುವ ಗಿಡಗಂಟಿ, ಹಾಳು ಕೊಂಪೆಯಂತೆ ಭಾಸವಾಗುವ ಸರ್ಕಾರಿ ಶಾಲಾ ಮುಂಭಾಗ, ಸಾರಿಗೆ ಬಸ್ ಗಳನ್ನೇ ಕಾಣದ ಊರು.. ಹೀಗೆ ಹತ್ತು ಹಲವು ಸಮಸ್ಯೆಗಳಿಂದ ತಾಲ್ಲೂಕಿನ ಯಾಳನಹಳ್ಳಿ ಗ್ರಾಮ ನಲುಗುತ್ತಿದೆ.

ಹಿರೀಸಾವೆ ಹೋಬಳಿ ಜಿನ್ನೇನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರುವ ಯಾಳನಹಳ್ಳಿ ಗ್ರಾಮ ಮೂಲ ಸೌಲಭ್ಯಗಳಿಲ್ಲದೆ ನಲುಗುತ್ತಿರುವುದರ ಜೊತೆಗೆ ಅನೈರ್ಮಲ್ಯ ತಾಂಡವಾಡುತ್ತಿದ್ದು ಸಾಂಕ್ರಾಮಿಕ ಕಾಯಿಲೆಗಳ ಭೀತಿಯು ಗ್ರಾಮಸ್ಥರನ್ನು ಕಾಡುತ್ತಿದೆ.

ಗ್ರಾಮದಲ್ಲಿ 125 ಮನೆಗಳಿದ್ದು ಸುಮಾರು 650ಕ್ಕೂ ಹೆಚ್ಚು ಜನಸಖ್ಯೆ ಇದೆ. ಗ್ರಾಮವು 800 ವರ್ಷಗಳಿಗೂ ಮಿರಿದ ಇತಿಹಾಸ ಹೊಂದಿದೆಯಾದರೂ ಅಗತ್ಯ ಸೌಲಭ್ಯಗಳನ್ನು ಕಾಣದ ಕಗ್ಗತ್ತಲೆಯ ಗೂಡಾಗಿದೆ ಎಂಬುದು ಸ್ಥಳೀಯರ ಆರೋಪ. ಹೋಬಳಿ ಕೇಂದ್ರದಿಂದ ಗ್ರಾಮದ ಮಾರ್ಗವಾಗಿ ಹಾದುಹೋಗಿರುವ ಮುಖ್ಯರಸ್ತೆ ಹೊರತುಪಡಿಸಿದರೆ ಉಳಿದಂತೆ ಗ್ರಾಮದ ಯಾವ ಬೀದಿಗಳು ಸೂಕ್ತ ರಸ್ತೆ ಹೊಂದಿಲ್ಲ. ಚರಂಡಿ ವ್ಯವಸ್ಥೆ ಇದ್ದರೂ ವೈಜ್ಞಾನಿಕವಾಗಿ ನಿರ್ಮಿಸಿಲ್ಲದ ಕಾರಣ ಹೂಳು ತುಂಬಿಕೊಂಡಿದೆ. ಗಿಡಗಂಟಿಗಳು ಹೇರಳವಾಗಿ ಬೆಳೆದು ರಸ್ತೆಗೆ ಚಾಚಿಕೊಂಡಿವೆ. ಇದರಿಂದ ಜನರು ತಿರುಗಾಡಲು ಸಮಸ್ಯೆಯಾಗುತ್ತಿದೆ ಎಂಬುದು ಗ್ರಾಮಸ್ಥರ ದೂರಾಗಿದೆ.





### ವಿಪರೀತ ಸೊಳ್ಳೆ ಕಾಟ

ಗ್ರಾಮದ ಯಾವ ಬೀದಿಗಳಲ್ಲಿಯೂ ಸೂಕ್ತ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇಲ್ಲ. ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಇಲ್ಲದೆ ಎಲ್ಲೆಂದರಲ್ಲಿ ಸಂಗ್ರಹವಾಗುತ್ತಿದೆ. ಅಲ್ಲದೆ ಹೇರಳವಾಗಿ ಗಿಡಗಂಟಿಗಳು ಬೆಳೆದಿದ್ದು ಸಂಜೆಯಾದರೆ ಸೊಳ್ಳೆಗಳ ಕಾಟ ತೀವ್ರಗೊಂಡಿದ್ದು ಸಾಂಕ್ರಾಮಿಕ ರೋಗ ರುಜಿನುಗಳು ಹರಡುವ ಭೀತಿ ಮನೆ ಮಾಡಿದೆ ಎಂದು ಗ್ರಾಮದ ಮಹಿಳೆಯೊಬ್ಬರು ತಮ್ಮ ಅಳಲು ತೋಡಿಕೊಂಡರು.

### ಕಾಣದ ರಸ್ತೆಗಳು

ಊರಿನ ಒಂದೆರೆಡು ಬೀದಿಗಳ ರಸ್ತೆಗೆ ಕಳೆದ 5-6 ವರ್ಷಗಳ ಹಿಂದೆ ಕಾಂಕ್ರಿಟ್ ಅಳವಡಿಸಿದ್ದರೂ ಪ್ರಯೋಜವಾಗಿಲ್ಲ. ಚರಂಡಿ ವ್ಯವಸ್ಥೆ ಇಲ್ಲದೆ ಕಳಪೆ ಹಾಗೂ ಅವೈಜ್ಞಾನಿಕ ಕಾಮಗಾರಿ ಪರಿಣಾಮ ಈಗಾಗಲೇ ರಸ್ತೆಗಳು ಹಾಳಾಗಿವೆ. ಉಳಿದ ಬೀದಿಯ ರಸ್ತೆಗಳು ಮಳೆ ಸುರಿದರೆ ಕೆಸರು ಗದ್ದೆಯಂತಾಗಲಿವೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

> ಯಾಳನಹಳ್ಳಿ ಗ್ರಾಮಕ್ಕೆ ಶೀಘ್ರ ಭೇಟಿ ನೀಡಿ ಸದಸ್ಯರ ಸಮ್ಮುಖದಲ್ಲಿ ಪರಿಶೀಲನೆಯೊಂದಿಗೆ ಸ್ಥಳೀಯರಿಂದ ಅಗತ್ಯ ಮಾಹಿತಿ ಪಡೆದು ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ ಕ್ರಮ ಕೈಗೊಳ್ಳಲಾಗುವುದು.
>
> **- ವೀಣಾ,**
> **ಗ್ರಾಮ ಪಂಚಾಯಿತಿ ಪ್ರಭಾರ ಅಭಿವೃದ್ಧಿ ಅಧಿಕಾರಿ**

### ಶಾಲೆ ಸುತ್ತಲೂ ಅವ್ಯವಸ್ಥೆ

ಊರಿನ ಮಧ್ಯಭಾಗದಲ್ಲಿ ಸರ್ಕಾರಿ ಶಾಲೆ ಇದ್ದು ಶಾಲಾ ಕಟ್ಟಡದ ಸುತ್ತಲೂ ಗಿಡಗಂಟಿಗಳು ಹೇರಳವಾಗಿ ಬೆಳೆದಿರುವ ಕಾರಣ ಸ್ವಚ್ಛತೆ ಕಾಣದಾಗಿದೆ. ಮಳೆಗಾಲದಲ್ಲಿ ಗ್ರಾಮದ ಬಹುತೇಕ ಬೀದಿಗಳ ನೀರು ಶಾಲೆಯ ಮುಂದೆಯೇ ಹರಿಯುತ್ತದೆ. ಇಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮಳೆ ನೀರಿನಲ್ಲಿ ಮಣ್ಣು ಕೊಚ್ಚಿ ಹೋಗಿದ್ದು ಗುಂಡಿ ಮಾರ್ಪಟ್ಟಿವೆ. ಗ್ರಾಮ ಪಂಚಾಯಿತಿ ವತಿಯಿಂದ ನರೇಗಾ ಹಾಗು ಇನ್ನಿತರೆ ಯೋಜನೆಗಳಡಿ ಶೈಕ್ಷಣಿಕ ಅಭಿವೃದ್ಧಿ ಸಲುವಾಗಿ ಚರಂಡಿ, ರಸ್ತೆ, ಕಾಂಪೌಂಡ್ ಸೇರಿ ಹಲವು ಕಾಮಗಾರಿಗಳನ್ನು ಕೈಗೊಳ್ಳಲು ಜನಪ್ರತಿನಿಧಿಗಳು ಹಾಗು ಅಧಿಕಾರಿಗಳಲ್ಲಿ ಆಸಕ್ತಿ ಇಲ್ಲದ ಪರಿಣಾಮ ಶಾಲೆ ಹಾಗೂ ಸುತ್ತಲಿನ ಪರಿಸರ ಅನೈರ್ಮಲ್ಯದ ತಾಣವಾಗಿ ಪರಿಣಮಿಸಿದೆ ಎಂದು ಗ್ರಾಮದ ಯುವಕ ವೈ.ಎಂ. ಶೇಖರ್ ಅಸಮಾಧಾನ ಹೊರ ಹಾಕಿದರು.

### ಪಾಳು ಬಿದ್ದಿರುವ ನೀರಿನ ತೊಂಬೆಗಳು

ಗ್ರಾಮದಲ್ಲಿ 15ಕ್ಕೂ ಹೆಚ್ಚು ನೀರಿನ ತೊಂಬೆಗಳಿವೆ. ಆದರೆ, ಕೇಂದ್ರ ಸರ್ಕಾರದ ಬಹುನಿರೀಕ್ಷೆಯ ಜೆಜೆಎಂ ಯೋಜನೆಯಡಿ ಗ್ರಾಮದ ಎಲ್ಲಾ ಮನೆಗಳ ಬಾಗಿಲ ವರೆಗೆ ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದ್ದು ಸದ್ಯಕ್ಕೆ ಅದರ ಮೂಲಕವೇ ಕಳೆದ 2-3 ತಿಂಗಳಿಂದ ಕುಡಿಯುವ ನೀರಿನ ಪೂರೈಕೆ ಮಾಡಲಾಗುತ್ತಿದೆ. ಇದರಿಂದಾಗಿ ನೀರಿನ ತೊಂಬೆಗಳತ್ತ ಗ್ರಾಮ ಪಂಚಾಯಿತಿ ಅಧಿಕಾರಿಗಳು ಗಮನ ಹರಿಸಿಲ್ಲ.

> ಗ್ರಾಮ ಪಂಚಾಯಿತಿಯ ವಿವಿಧ ಯೋಜನೆಯಡಿ ರಸ್ತೆ, ಚರಂಡಿ ಹಾಗು ಇತರೆ ಯಾವ ಕಾಮಗಾರಿ ತಂದರೂ ಕೆಲಸ ಮಾಡಲು ಕೆಲವರು ಬಿಡುವುದಿಲ್ಲ. ಗ್ರಾ.ಪಂ., ತಾ.ಪಂ. ಹಾಗೂ ಸಂಬಂಧಪಟ್ಟ ಇಲಾಖೆ ಅಥವಾ ಅಧಿಕಾರಿಗಳಿಗೆ ಮೂಗರ್ಜಿ ಬರೆದು ತಡೆಯುತ್ತಿರುವ ಪರಿಣಾಮ ಗ್ರಾಮದ ಅಭಿವೃದ್ಧಿಗೆ ತೊಡಕಾಗುತ್ತಿದೆ.
>
> **- ವೈ. ಮಂಜು, ಗ್ರಾ.ಪಂ. ಸದಸ್ಯ**



ನಿರ್ವಹಣೆ ಕೊರತೆಯಿಂದ ನೀರಿನ ತೊಂಬೆಗಳು ಪಾಳು ಬಿದ್ದಿವೆ. ಪ್ಲಾಟ್ ಫಾರಂಗಳು ಹಾಳಾಗಿವೆ. ಪೈಪ್ ಹಾಗೂ ನಲ್ಲಿಗಳು ತುಕ್ಕು ಹಿಡಿದಿವೆ. ಸುತ್ತಲು ಗಿಡಗಳು ಬೆಳೆದಿವೆ. ಅನಿವಾರ್ಯ ಸಮಸ್ಯೆಯಾದಲ್ಲಿ ಮುಂದಿನ ದಿನಗಳಲ್ಲಿ ಮರುಬಳಕೆ ಮಾಡಲು ಸಾಧ್ಯವಾಗದಂತಹ ಸ್ಥಿತಿಗೆ ತಲುಪುತ್ತಿವೆ ಎಂಬುದು ಗ್ರಾಮಸ್ಥರ ಆತಂಕವಾಗಿದೆ.

### ಬೀದಿ ದೀಪಗಳಿಲ್ಲ

ಗ್ರಾಮದ ಮುಖ್ಯ ರಸ್ತೆಯ ಕೆಲವೆಡೆ ಹೊರತುಪಡಿಸಿದರೆ ಬಹುತೇಕ ಬೀದಿಗಳಲ್ಲಿ ಬೀದಿ ದೀಪಗಳಿಲ್ಲ. ಹಬ್ಬ ಹರಿದಿನಗಳ ವೇಳೆ ಗ್ರಾಮ ಪಂಚಾಯಿತಿಯಿಂದ ಎಲ್ಲಾ ಬೀದಿಗಳ ಕಂಬಗಳಿಗೆ ಬೀದಿದೀಪ ಅಳವಡಿಸಲಾಗಿದೆ ಎನ್ನಲಾದರೂ ಇಲ್ಲಿ ಬೆರಳೆಣಿಕೆಯಷ್ಟು ಕಡೆ ಮಾತ್ರ ಬೀದಿ ದೀಪ ನೋಡಲು ಸಿಗಲಿವೆ. ಉಳಿದೆಡೆ ರಾತ್ರಿ ವೇಳೆ ಕತ್ತಲು ಆವರಿಸಲಿದೆ. ರಾತ್ರಿ ವೇಳೆ ಹೊರ ಬರುವುದು ಹಾಗು ಅಕ್ಕಪಕ್ಕದ ಬೀದಿಗಳಿಗೆ ತಿರುಗಾಡಲು ಸಮಸ್ಯೆಯಾಗಲಿದೆ ಎಂದು ಗೃಹಿಣಿ ಲಕ್ಷ್ಮಮ್ಮ ತಿಳಿಸಿದರು.

### ಸಾರಿಗೆ ವ್ಯವಸ್ಥೆ ಇಲ್ಲ

ಅಕ್ಕಪಕ್ಕದ ಬಹುತೇಕ ಗ್ರಾಮಗಳಿಗೆ ಸಾರಿಗೆ ಬಸ್ ಸಂಚಾರದ ವ್ಯವಸ್ಥೆ ಇದ್ದರೂ ಈ ಗ್ರಾಮ ಪೂರ್ವ ಕಾಲದಿಂದಲೂ ಒಂದು ಕೆಂಪು ಬಸ್ ಕಂಡಿಲ್ಲ. ಸಾರ್ವಜನಿಕರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಹೋಬಳಿ ಕೇಂದ್ರ ಹಿರೀಸಾವೆಗೆ ಸುಮಾರು 7 ಕಿ.ಮೀ. ನಡೆದು ಸಾಗಬೇಕು. ದ್ವಿಚಕ್ರ ವಾಹನ ಉಳ್ಳವರು ಪರವಾಗಿಲ್ಲ ಇಲ್ಲದವರ ಪಾಡೇನು ಎಂಬುದು ಗ್ರಾಮಸ್ಥರ ಪ್ರಶ್ನೆಯಾಗಿದೆ.

# ಪ್ರಗತಿ ಹೆಸರಿನಲ್ಲಿ ಪರಿಸರ ಧ್ವಂಸ ಆಗಬಾರದು




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪ್ರಗತಿಯ ಹೆಸರಿನಲ್ಲಿ ಪರಿಸರ ಧ್ವಂಸ ಆಗಬಾರದು. ಸುಸ್ಥಿರ ಅಭಿವೃದ್ಧಿಯಿಂದ ಪರಿಸರಕ್ಕೂ ಪೂರಕವಾಗಿರುತ್ತದೆ ಎಂದು ಮಾಜಿ ಶಾಸಕ, ಪರಿಸರಕ್ಕಾಗಿ ನಾವು ಸಂಘಟನೆಯ ರಾಜ್ಯಾಧ್ಯಕ್ಷ ಎ.ಟಿ. ರಾಮಸ್ವಾಮಿ ನುಡಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪರಿಸರ ಪ್ರೇಮಿಗಳು, ಜ್ಞಾನಧಾರೆ ಪ್ಯಾರಾ ಮೆಡಿಕಲ್ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಹವಾಮಾನ ವೈಪರೀತ್ಯ, ಕಾರಣ, ಬಿಕ್ಕಟ್ಟು ಮತ್ತು ಪರಿಹಾರ ವಿಚಾರಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಜಾಗತಿಕ ತಾಪಮಾನದಿಂದ ಹವಾಮಾನ ಅಪಾಯ ಸ್ಥಿತಿಯಲ್ಲಿದೆ. ಇದನ್ನು ತುರ್ತು ಪರಿಸ್ಥಿತಿಯೆಂದು ವಿಶ್ಲೇಷಿಸುತ್ತೇನೆ. ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯದ ಪೀಳಿಗೆಗೆ ನರಕದ ವಾತಾ ವರಣ ಮೂಡುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಣ್ಣು, ನೀರು, ಬೆಟ್ಟ, ಗುಡ್ಡಗಳನ್ನು ಅಗೆಯುತ್ತಿದ್ದೇವೆ. ಜಲ ಮೂಲ ವಿಷವಾಗುತ್ತಿದೆ. ಸೇವಿಸುವ ಗಾಳಿಯೂ ಇದಕ್ಕೇನು ಹೊರತಲ್ಲ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಹಸಿರು ಹೊದಿಕೆಯೇ ಮಾಯವಾಗಿದೆ ಎಂದು ಹೇಳಿದರು.

ಅಭಿವೃದ್ಧಿ ಹೆಸರಿನಲ್ಲಿ ಮರಗಳನ್ನು ಎಗ್ಗಿಲ್ಲದೆ ಕಡಿಯುತ್ತಿದ್ದರೂ ಪ್ರಶ್ನಿಸುವವರೇ ಇಲ್ಲದಂತಾಗಿದೆ. ಅರಣ್ಯ ಇಲಾಖೆ, ಪರಿಸರ ಇಲಾಖೆ ಏನು ಮಾಡುತ್ತಿದೆ? ಮಣ್ಣಿನ ಫಲವತ್ತತೆ ಹಾಳಾಗಿದೆ. ಜಗತ್ತು ಸಂಕಷ್ಟದಲ್ಲಿದೆ. ಬೆಟ್ಟ-ಗುಡ್ಡಗಳು ನಾಶವಾಗುತ್ತಿವೆ. ಅತಿಯಾದ ಮಳೆ ಹಾಗೂ ಬಿಸಿಲಿಗೆ ನಾವು ತಂದು ಕೊಂಡಿರುವ ಆಪತ್ತೇ ಕಾರಣ. ಹೀಗಾಗಿ ಹವಾಮಾನ ವೈಪರೀತ್ಯ ಅನುಭವಿಸುತ್ತಿದ್ದೇವೆ. ಹಲವಾರು ಜೀವ ಸಂಕುಲಗಳು ನಾಶವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಕಾಳಜಿ ವಹಿಸಿದರೆ ಒಳ್ಳೆಯದು ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಹಾಸನ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಮತೇಶ್, ಜಿಲ್ಲಾ ಸರ್ಕಾರಿ ನೌಕರರ ಮಾಜಿ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್, ಸಿಐಟಿಯು ಧರ್ಮೇಶ್, ಸಾಹಿತಿ ಮಹೇಶ್ ಚಟ್ನಹಳ್ಳಿ ಇತರರು ಹಾಜರಿದ್ದರು.

ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕೃತರಾದ ಯಲಗುಂದ ಗ್ರಾಮದ ಸಾಲು ಮರದ ಪೊಲೀಸ್ ವೈ.ಬಿ.ಕಾಂತರಾಜು ಹಾಗೂ ಆರ್.ಜಿ.ಗಿರೀಶ್ ಅವರನ್ನು ಸನ್ಮಾನಿಸಲಾಯಿತು.

# ದೇಗುಲ ಜೀರ್ಣೋದ್ಧಾರಕ್ಕೆ 1 ಕೋಟಿ ರೂ.



ಚನ್ನರಾಯಪಟ್ಟಣ: ಕಂಬದ ನರಸಿಂಹಸ್ವಾಮಿ ದೇವಾಲಯವನ್ನು 1 ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಲಾಗುತ್ತಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಎಂ.ಹೊನ್ನೇನಹಳ್ಳಿ ಗ್ರಾಮದಲ್ಲಿ ಶ್ರೀ ಕಂಬದ ನರಸಿಂಹಸ್ವಾಮಿ ದೇಗುಲ ಜೀರ್ಣೋದ್ಧಾರಕ್ಕೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಭೂಮಿಪೂಜೆ ದಿನದಂದು 1 ಲಕ್ಷ ರೂ. ಹಣ ನೀಡುತ್ತಿದ್ದು ಮುಂಬರುವ ದಿನಗಳಲ್ಲಿ ಹೆಚ್ಚಿನ ಅನುದಾನ ಕಲ್ಪಿಸಲಾಗುವುದು ಭರವಸೆ ನೀಡಿದರು.

ಗ್ರಾಮದಲ್ಲಿ ರಸ್ತೆ, ಸಮುದಾಯ ಭವನ ಸೇರಿ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಲಾಗಿದೆ. ತೋಟಿ ಏತ ನೀರಾವರಿ ಪೂರ್ಣಗೊಂಡ ನಂತರ ಈ ಭಾಗದ ಕೆರೆಗಳಿಗೆ ನೀರು ಹರಿಸಿ ತುಂಬಿಸಲಾಗುತ್ತದೆ. ದೇಗುಲ ಜೀರ್ಣೋದ್ಧಾರಕ್ಕೆ ದಾನಿಗಳು ಹಾಗೂ ಭಕ್ತರು ಹೆಚ್ಚಿನ ಧನ ಸಹಾಯ ಮಾಡುವ ಮೂಲಕ ದೇವಾಲಯ ಕಾಮಗಾರಿ ಬೇಗ ಪೂರ್ಣಗೊಳ್ಳಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

# ಇತಿಹಾಸದಲ್ಲಿ ಈ ದಿನ

## ಜೂನ್-24

**1975:** ಭಾರತದ ಪ್ರಧಾನಮಂತ್ರಿ ಇಂದಿರಾ ಗಾಂಧಿ ವಿರುದ್ಧವಿದ್ದ ನ್ಯಾಯಾಲಯದ ತೀರ್ಪು ಹಿನ್ನೆಲೆಯಲ್ಲಿ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರು ರಾಷ್ಟ್ರದಲ್ಲಿ ಆಪತ್‌ಕಾಲ ಘೋಷಿಸಿದರು. ಇದು ಭಾರತದ ಐತಿಹಾಸಿಕವಾಗಿ ಬಹು ಚರ್ಚಿತ ರಾಜಕೀಯ ತಿರುವುಗಳಲ್ಲಿ ಒಂದು.

**1981:** ಭಾರತೀಯ ಗಗನಯಾನ ಸಂಸ್ಥೆ ತನ್ನ ಎರಡನೇ ಉಪಗ್ರಹವಾದ **'APPLES' (Ariane Passenger Payload Experiment)'** (ಇಸ್ರೋ) ಅನ್ನು ಯಶಸ್ವಿಯಾಗಿ ಕಕ್ಷೆಗೆ ಉಡಾವಣೆ ಮಾಡಿತು.

**1509:** ಇಂಗ್ಲೆಂಡಿನ ರಾಜ ಹೆನ್ರಿ ಅಧಿಕೃತವಾಗಿ ಸಿಂಹಾಸನಾರೋಹಣ ಮಾಡಿದರು.

**1812:** ನೆಪೋಲಿಯನ್ ಬೊನಪಾರ್ಟ್ ತನ್ನ ಹೆಬ್ಬೆಟ್ಟೆಯ 'ರಷ್ಯಾ ದಾಳಿ' ಆರಂಭಿಸಿದ ದಿನ.

**1901:** ಪ್ಯಾಬ್ಲೋ ಪಿಕಾಸೊ ಮೊದಲ ಬಾರಿಗೆ ಪ್ಯಾರಿಸ್‌ನಲ್ಲಿ ತನ್ನ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟರು.

**2010:** ಫುಟ್ಬಾಲ್ ಇತಿಹಾಸದ ಬಹು ದೀರ್ಘ ಸಮಯದ ಪಂದ್ಯ **ohn Isner vs Nicolas Mahut** ವಿಂಬಲ್ಡನ್‌ನಲ್ಲಿ 11 ಗಂಟೆಗಳ ಕಾಲ ನಡೆಯಿತು.

### ಜನನ

**1911:** ಜುವಾನ್ ಮ್ಯಾನುಯೆಲ್ ಫಾಂಗಿಯೋ, ಅರ್ಜೆಂಟಿನಾದ ಪ್ರಸಿದ್ಧ ಫಾರ್ಮುಲಾ 1 ಚಾಂಪಿಯನ್.

**1895:** ಜಾಕ್ ಡೆಮ್ಸ್, ಫ್ರೆಂಚ್ ಸಿನಿಮಾ ನಿರ್ದೇಶಕ.

### ಮರಣ

**1908:** ಗ್ರೋವರ್ ಕ್ಲೀವ್‌ಲ್ಯಾಂಡ್, ಅಮೆರಿಕದ 22ನೇ ಮತ್ತು 24ನೇ ಅಧ್ಯಕ್ಷ.

**2021:** ಜಾನ್ ಮ್ಯಾಕಾಫೀ, ಪ್ರಖ್ಯಾತ ತಂತ್ರಾಂಶ ತಜ್ಞ ಮತ್ತು ಮ್ಯಾಕಾಫೀ ಆಂಟಿವೈರಸ್ ಸಂಸ್ಥಾಪಕ.

# ಮಲೆನಾಡ ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಲಗ್ಗೆ


## ವ್ಯಾಪಾರಿಗಳಿಗೆ ಶುಕ್ರದೆಸೆ । ಪ್ರಕೃತಿ ಸೌಂದರ್ಯ ಮೊಬೈಲ್‌ನಲ್ಲಿ ಸೆರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಳೆದ ಹಲವು ದಿನಗಳಿಂದ ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಲಗ್ಗೆಯಿಡುತ್ತಿದ್ದು ವ್ಯಾಪಾರ ವಹಿವಾಟು ಜೋರಾಗಿ ನಡೆಯುತ್ತಿದೆ.

ಮಳೆಗಾಲ ಬಂತೆಂದರೆ ಸಾಕು ಮಂಜಿನ ತೆರೆ, ಭೋರ್ಗರೆದು ಧುಮ್ಮಿಕ್ಕುವ ಹಳ್ಳ ಕೊಳ್ಳಗಳು, ದಟ್ಟನ ಕಾನನದೊಳಗೆ ಏಳುವ ಮಂಜು, ಗಿರಿ-ಶಿಖರದ ದೃಶ್ಯ ವೈಭವನನ್ನು ಕಣ್ತುಂಬಿಕೊಳ್ಳಲು ಜಿಲ್ಲೆ ಹಾಗೂ ಹೊರ ಜಿಲ್ಲೆಯಿಂದ ನೂರಾರು ಜನರು ಬರುತ್ತಾರೆ. ಅದರಲ್ಲೂ ವಾರಾಂತ್ಯ ಸಕಲೇಶಪುರ ವ್ಯಾಪ್ತಿಯಲ್ಲಿ ಪ್ರವಾಸಿಗರು ವಿಪರೀತ ಸಂಖ್ಯೆಯಲ್ಲಿರುತ್ತಾರೆ. ಪ್ರತಿ ಮಳೆಗಾಲದಲ್ಲೂ ಮಲೆನಾಡಿನ ಪ್ರಕೃತಿಯ ಸೊಬಗು, ರುದ್ರರಮಣೀಯ ದೃಶ್ಯಲೋಕಕ್ಕೆ ಮನಸೋಲದವರಿಲ್ಲ.

ಜನರ ಆಗಮನದಿಂದ ರಸ್ತೆ ಬದಿ ಹೋಟೆಲ್‌ಗಳು, ಅಂಗಡಿಗಳಿಗೆ ಶುಕ್ರದೆಸೆ ಆರಂಭವಾಗಿದೆ. ಬೇಸಿಗೆ ಸಮಯದಲ್ಲಿ ಪ್ರವಾಸಿಗರು ಬಾರದೆ ಇರುವುದರಿಂದ ಹಾಗೂ ರಸ್ತೆ ಕಾಮಗಾರಿ ನಡೆಯುತ್ತಿರುವ ಹಿನ್ನಲೆಯಲ್ಲಿ ಬಹುತೇಕ ಅಂಗಡಿಗಳು ಬಾಗಿಲು ಹಾಕಿರುತ್ತವೆ. ಆದರೆ ಈಗ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು ಹೋಟೆಲ್ ಮಾಲೀಕರಿಗೆ ಅನುಕೂಲವಾಗಿದೆ. ರಸ್ತೆಬದಿ ತಿಂಡಿ ಅಂಗಡಿಗಳಿಗೂ ಬೇಡಿಕೆ ಹೆಚ್ಚಾಗಿದೆ.



### ಪ್ರವಾಸಿಗರಿಗೆ ರಸದೌತಣ

ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಾಗೂ ಅವಧಿಗೂ ಮೊದಲೇ ಮುಂಗಾರು ಪ್ರವೇಶ ಮಾಡಿರುವುದರಿಂದ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಹೇಮಾವತಿ ಜಲಾಶಯ ಭರ್ತಿಯಾಗುವ ಹಂತಕ್ಕೆ ಬಂದಿದ್ದು ಆರು ಕ್ರಸ್ಟ್‌ಗೇಟ್‌ಗಳ ಮೂಲಕ ಒಂದು ದಿನದ ಮಟ್ಟಿಗೆ 10 ಸಾವಿರ ಕ್ಯೂಸೆಕ್ ನೀರು ಹೊರಬಿಡಲಾಗಿತ್ತು. ಯಗಚಿ ಜಲಾಶಯ ಕೂಡ ಭರ್ತಿಯಾಗಿ ನೀರನ್ನು ಹೊರಬಿಡಲಾಗುತ್ತಿದೆ. ಜಿಲ್ಲೆಯ ಬಹುತೇಕ ಕಡೆ ಮೋಡ ಕವಿದ ವಾತಾವರಣವಿದ್ದು ಆಗಾಗ ತುಂತುರು ಮಳೆಯಾಗುತ್ತಿದೆ. ಇದು ಪ್ರವಾಸಿಗರಿಗೆ ರಸದೌತಣ ಉಣಬಡಿಸುತ್ತಿದೆ.

### ಶಿರಾಡಿಘಾಟ್ ಸೌಂದರ್ಯ

ಬೆಂಗಳೂರು-ಮಂಗಳೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿ ಮುಂದುವರೆದಿದೆ ಎಂಬುದನ್ನು ಹೊರತುಪಡಿಸಿದರೆ ಪ್ರವಾಸಿಗರಿಗೆ ಯಾವ ಸಮಸ್ಯೆಯೂ ಇಲ್ಲ. ಹೀಗಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಸ್ನೇಹಿತರೊಂದಿಗೆ ತಂಡೋಪತಂಡವಾಗಿ ಕಾರುಗಳ ಮೂಲಕ ಸಕಲೇಶಪುರಕ್ಕೆ ಲಗ್ಗೆ ಇಡುತ್ತಾರೆ. ಸಕಲೇಶಪುರ ಮಾರ್ಗವಾಗಿ ಶಿರಾಡಿಘಾಟ್ ರಸ್ತೆಯಲ್ಲಿ ಪ್ರಯಾಣಿಸಿದರೆ ಸಾಕು ಎರಡು ಬದಿಯು ಕಂಗೊಳಿಸುವ ಹಸಿರು, ಜಿಟಿ ಜಿಟಿ ಮಳೆ, ದಟ್ಟ ಅರಣ್ಯದ ನಡುವೆ ಹಾಗೂ ರಸ್ತೆಯಲ್ಲಿ ಬೀಳುವ ಮಂಜು ಮನಸ್ಸಿಗೆ ಉಲ್ಲಾಸ ನೀಡುತ್ತದೆ. ಹಸಿರ ಸೆರಗು ಹೊದ್ದು ಮಲಗಿರುವ ಮಲೆನಾಡಿನ ಮೈಸಿರಿಗೆ ಮಳೆಯ ಸ್ಪರ್ಶವಾಗುತ್ತಿದ್ದಂತೆಯೇ ಬೇರೆಯದೇ ರೀತಿಯಲ್ಲಿ ಕಂಗೊಳಿಸುತ್ತದೆ. ಈ ಮಾರ್ಗದಲ್ಲಿ ಸಂಚಸಿರುವವರು ಇಲ್ಲಿ ಕೆಲಕಾಲ ನಿಂತು, ನೀರಿನಲ್ಲಿ ಆಟವಾಡಿ, ಫೋಟೋ ಕ್ಲಿಕ್ಕಿಸಿಕೊಂಡು ಮುಂದೆ ಸಾಗುವುದು ಸಾಮಾನ್ಯವಾಗಿದೆ. ಮಾರ್ಗದುದ್ದಕ್ಕೂ ಎತ್ತರದಿಂದ ಕಾಡಿನ ನಡುವೆ ಹತ್ತಾರು ಜರಿಗಳು ಹರಿಯುತ್ತಿದ್ದು ನೋಡುಗರನ್ನು ಕೈಬೀಸಿ ಕರೆಯುತ್ತಿದೆ. ಧರ್ಮಸ್ಥಳ, ಸುಬ್ರಹ್ಮಣ್ಯ, ಮಂಗಳೂರಿಗೆ ಪ್ರಯಾಣಿಸುವವರಿಗೆ ಹೊಸದೊಂದು ಲೋಕಕ್ಕೆ ಹೋದಂತೆ ಭಾಸವಾಗುತ್ತಿದೆ. ಮಳೆಗಾಲವನ್ನು ಸಾರ್ವಜನಿಕರು ಎಂಜಾಯ್ ಮಾಡುತ್ತಿದ್ದಾರೆ. ಶಿರಾಡಿ ಘಾಟ್‌ನ ಜರಿಗಳು ಮಾತ್ರವಲ್ಲದೆ ಬಿಸ್ಲೆ ಘಾಟ್, ಪಟ್ಲ ಬೆಟ್ಟ, ಮುಂಜರಾಬಾದ್ ಕೋಟೆ, ಯಡಕುಮರಿ ರೈಲ್ವೆ ಟನಲ್, ಮೂಕನಮನೆ ಜಲಪಾತ ಪ್ರವಾಸಿಗರ ನೆಚ್ಚಿನ ತಾಣಗಳಾಗಿವೆ.

# ನ್ಯಾಯಾಲಯಗಳು ಜನರಿಗೆ ಹತ್ತಿರ ಇರಬೇಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಸಾರ್ವಜನಿಕರು ಸುಲಭವಾಗಿ ಬರಲು ಅನುಕೂಲವಾಗುವಂತೆ ನ್ಯಾಯಾಲಯಗಳನ್ನು ತಾಲ್ಲೂಕು ಕಚೇರಿ ಆಸುಪಾಸಿನಲ್ಲೇ ನಿರ್ಮಿಸಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಜಿಲ್ಲಾ ಆಡಳಿತಾತ್ಮಕ ನ್ಯಾ. ಹೆಚ್.ಟಿ. ನರೇಂದ್ರ ಪ್ರಸಾದ್ ಹೇಳಿದರು.

ಪಟ್ಟಣದ ಹೊರವಲಯದ ಜೆಎಂಎಫ್‌ಸಿ ನ್ಯಾಯಾಲಯ ಆವರಣದಲ್ಲಿ ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ, ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸಂಕೀರ್ಣ ಉದ್ಘಾಟಿಸಿ ಮಾತನಾಡಿ, ಈ ನ್ಯಾಯಾಲಯದಲ್ಲಿ ಆರು ಸಾವಿರಕ್ಕೂ ಅಧಿಕ ಪ್ರಕರಣಗಳಿವೆ ಎಂಬ ಹಿನ್ನೆಲೆಯಲ್ಲಿ ಹೆಚ್ಚುವರಿ ನ್ಯಾಯಾಲಯ ನೀಡಲಾಗಿದೆ. ಇನ್ನು ಮುಂದೆ ವಕೀಲರ ಜವಾಬ್ದಾರಿ ಜಾಸ್ತಿ ಇದೆ. ಕಕ್ಷಿದಾರರು ವಿನಾಃಕಾರಣ ಅಲೆಯುವ ಪರಿಸ್ಥಿತಿ ನಿರ್ಮಿಸಬೇಡಿ, ನ್ಯಾಯಾಲಯದಲ್ಲಿ ಕನಿಷ್ಟ ಒಂದು ಸುಸಜ್ಜಿತ ಸಭಾಂಗಣ ಇರಬೇಕು. ಶಾಸಕರ ಸಹಕಾರ ಪಡೆದು ಶೀಘ್ರವೇ ವಕೀಲರ ಭವನ, ಗ್ರಂಥಾಲಯ, ಸಭಾಂಗಣ, ವಸತಿ ಗೃಹಕ್ಕೆ ಪ್ರಸ್ತಾವನೆ ಕಳಿಸಿ ಎಂದು ಸಲಹೆ ನೀಡಿದರು.



ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ ಇಲಾಖೆಗೆ ಹೆಣ್ಣು ಮಕ್ಕಳು ಬರುತ್ತಿರುವುದು ಸಂತಸದ ವಿಷಯ. ಪ್ರತಿ ಮೂರು ತಿಂಗಳಿಗೊಮ್ಮೆ ಕಾರ್ಯಾಗಾರ ಏರ್ಪಡಿಸುವುದರಿಂದ ಯುವ ವಕೀಲರಿಗೆ ಕಾನೂನಿನ ಅರಿವು ಹೆಚ್ಚುತ್ತದೆ. ವಕೀಲರ ಭವನ ನಿರ್ಮಾಣ ಮಾಡುವುದಾದರೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಮಾತನಾಡಿ, ನ್ಯಾಯಾಧೀಶರು, ವಕೀಲರು ಮತ್ತು ಸಿಬ್ಬಂದಿ ಕಕ್ಷಿದಾರರನ್ನು ಅನ್ನದಾತರು ಎಂದು ಗೌರವಿಸಿದರೆ ಮಾತ್ರ ನ್ಯಾಯಾಂಗ ಇಲಾಖೆಯ ಘನತೆ ಉಳಿಯುತ್ತದೆ. ನೊಂದವರಿಗೆ ಮತ್ತೆ ಮತ್ತೆ ಅಲೆಯುವ ಸ್ಥಿತಿ ಮಾಡಬೇಡಿ. ಆದಷ್ಟು ಕಡಿಮೆ ಶುಲ್ಕದಲ್ಲಿ ಅವರಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡಿದಾಗ ಮಾತ್ರ ಅವರ ಬೆವರಿಗೆ ಬೆಲೆ ಬರುತ್ತದೆ. ಮಲೆನಾಡು ಭಾಗದ ವಕೀಲರು ಬೆಳಿಗ್ಗೆ ಲಾಯರ್ ಮಧ್ಯಾಹ್ನ ತೋಟ ಎನ್ನುವ ಬದಲು ಸಂಪೂರ್ಣ ನ್ಯಾಯಾಂಗದಲ್ಲಿ ತೊಡಗಿಸಿಕೊಂಡು ನ್ಯಾಯ ನೀಡಿ, ವಿಶ್ವಮಾನವ ಧರ್ಮ ಪಾಲಿಸುವ ನಿಟ್ಟಿನಲ್ಲಿ ಮುಂದಾಗಿ, ತಾವು ದುಡಿಯುವಂತಹ ದುಡಿಮೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದಕ್ಕೆ ಹೆಚ್ಚಿನ ಕಾಳಜಿ ವಹಿಸಿ ಎಂದು ವಕೀಲರಿಗೆ ಕಿವಿಮಾತು ಹೇಳಿದರು.

ಶಾಸಕ ಹೆಚ್.ಕೆ. ಸುರೇಶ್ ಮಾತನಾಡಿ, ಪಟ್ಟಣದ ನ್ಯಾಯಾಲಯದಲ್ಲಿ 6 ಸಾವಿರ ಪ್ರಕರಣಗಳಿವೆ. ತ್ವರಿತ ಇತ್ಯರ್ಥಕ್ಕೆ ಹೆಚ್ಚುವರಿ ನ್ಯಾಯಾಲಯದ ಅವಶ್ಯವಿರುವ ನಿಟ್ಟಿನಲ್ಲಿ ವಕೀಲರ ಕೋರಿಕೆಯಂತೆ ಹೆಚ್ಚುವರಿ ನ್ಯಾಯಾಲಯವಾಗಿದೆ. ಅಲ್ಲದೆ ವಕೀಲರ ಹಿತದೃಷ್ಟಿಯಿಂದ ಸರ್ಕಾರಕ್ಕೆ ಒಂದು ಮನವಿ ಸಲ್ಲಿಸಿದರೆ ವಕೀಲರ ಭವನ ಹಾಗೂ ನ್ಯಾಯಾಧೀಶರಿಗೆ ಹೆಚ್ಚುವರಿ ಕಟ್ಟಡವನ್ನು ನಿರ್ಮಾಣ ಮಾಡಲು ನಾನು ಪ್ರಯತ್ನಿಸುತ್ತೇನೆ. ಈ ನ್ಯಾಯಾಲಯಕ್ಕೆ ಬೇಕಾಗುವ ಮೂಲಸೌಕರ್ಯಗಳನ್ನು ನೀಡಲು ಬದ್ಧ ಎಂದು ಭರವಸೆ ನೀಡಿದರು.

ಜಿಲ್ಲಾ ನ್ಯಾಯಾಧೀಶರಾದ ಹೇಮಾವತಿ, ತಾಲ್ಲೂಕು ಹಿರಿಯ ಶ್ರೇಣಿ ನ್ಯಾಯಾಧೀಶರಾದ ಶಶಿಕಲಾ, ಕಿರಿಯ ನ್ಯಾಯಾಧೀಶ ನಾಗೇಂದ್ರ, ನೂತನ ನ್ಯಾಯಾಧೀಶರಾದ ಸಲ್ಮ, ಲೋಕೋಪಯೋಗಿ ಇಲಾಖೆ ಅಧೀಕ್ಷಕ ನಳಿನ, ಕಾರ್ಯನಿರ್ವಾಹಕ ಅಭಿಯಂತರ ಗಿರೀಶ್, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಸಿ.ಎಂ. ಪೃಥ್ವಿ, ಕಾರ್ಯದರ್ಶಿ ಪುಟ್ಟಸ್ವಾಮೀಗೌಡ, ದಿಲೀಪ್, ಹಿರಿಯ ವಕೀಲ ಲಿಂಗೇಶ್, ಚಂದ್ರೇಗೌಡ, ನಟರಾಜ್, ಸರ್ಕಾರಿ ಅಭಿಯೋಜಕಿ ಶಶಿಕಲಾ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248